ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಮಂಗಳವಾರ, ದಿನಾಂಕ ೧೭ನೇ ಮಾರ್ಚಿ ೧೯೮೭ ಫಾಲ್ಗುಣ ೨೬, ೧೯೦೮ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೨–೦೫ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಪೀಠವನ್ನು ಅಲಂಕರಿಸಿದ್ದರು]

ಕಾಂಗ್ರೆಸ್ (ಐ) ಪಕ್ಷದ ಸದಸ್ಯರಿಂದ ಧರಣಿ ಸತ್ಯಾಗ್ರಹ.

ಸಭೆಯು ಸಮಾವೇಶಗೊಂಡಾಗ (ಕಾಂಗ್ರೆಸ್ 'ಐ' ಪಕ್ಷದ ಸದಸ್ಯರುಗಳು ಸಭಾಧ್ಯಕ್ಷರ ಪೀಠದ ಮುಂದಿರುವ ಅಂಗಳದಲ್ಲಿ (ವೆಲ್) ಧರಣಿ ಕುಳಿತಿದ್ದರು)

ಅಧ್ಯಕ್ಷರು.—ತಮ್ಮೆಲ್ಲರನ್ನು ನಾನು ಕೇಳಿಕೊಳ್ಳುವುದೇನೆಂದರೆ, ದಯವಿಟ್ಟು ತಾವುಗಳೆಲ್ಲರೂ ತಮ್ಮ ಆಸನದಲ್ಲಿ ಬಂದು ಕುಳಿತುಕೊಳ್ಳಬೇಕು. ತಮ್ಮ ಸ್ಥಾನಗಳಲ್ಲಿ ಬಂದು ಕುಳಿತುಕೊಂಡು ತಾವುಗಳು ಏನು ಹೇಳಬೇಕಿದ್ದಿರೋ ಅದನ್ನು ಹೇಳಬಹುದು. ಮುಂದೆ ಅದನ್ನು ಕೇಳಿಕೊಂಡು ಏನು ತೀರ್ಮಾನಕ್ಕೆ ಬರಬೇಕೋ ಹಾಗೆ ಮಾಡುವುದಕ್ಕೆ ಅನುಕೂಲವಾಗುತ್ತದೆ.. ...

(ಹಲವಾರು ಧರಣಿ ಕುಳಿತುಕೊಂಡಿದ್ದ ಮಾನ್ಯ ಸದಸ್ಯರುಗಳು) ಧಿಕ್ಕಾರ.....ಸರ್ಕಾರಕ್ಕೆ ಧಿಕ್ಕಾರ.....ಎಂದು ಘೋಷಣೆ ಹಾಕುತ್ತಿದ್ದರು.)

ಅಧ್ಯಕ್ಷರು.—ಈಗ ಏನು ಮಾಡಬೇಕೆನ್ನುವ ಬಗ್ಗೆ ನಿಮ್ಮೊಂದಿಗೆ ಕೂಡಿ, ಮಾತನಾಡಿ, ಒಂದು ನಿರ್ಣಯಕ್ಕೆ ಬರೋಣ. ತಾವುಗಳು ಹೀಗೆ ಮಾಡಿದರೆ ಸಭೆಯನ್ನು ಹೇಗೆ ನಡೆಸುವುದು ? ದಯವಿಟ್ಟು ತಮ್ಮ ಸ್ಥಾನಗಳಿಗೆ ಬಂದು ಕುಳಿತುಕೊಂಡು ನೆರವಾಗಬೇಕು. ದಯವಿಟ್ಟು ತಮ್ಮ ಸ್ಥಾನಗಳಿಗೆ ಬರಬೇಕು. This is my sincere and honest request to you all.

ಅಧ್ಯಕ್ಷರು.—ಮಾನ್ಯ ಶ್ರೀ ಕೆ ಹೆಚ್ ಪಾಟೀಲ್, ನಾಗರತ್ನಮ್ಮ, ಬಂಗಾರಪ್ಪ, ಶ್ರೀನಿವಾಸ್ ಮುಂತಾದವರು ಬಂದು ಮಾತನಾಡಲಿ. You are all my masters. ದಯವಿಟ್ಟು ತಮ್ಮ ಸ್ಥಾನಕ್ಕೆ ಬಂದು ಮಾತನಾಡಿ.

ಶ್ರೀ ಎಂ. ವೀರಪ್ಪಮೊಯ್ಲಿ.—ಇಲ್ಲಿ ಇದ್ದರೂ ಒಂದೇ. ಅಲ್ಲಿ ಇದ್ದರೂ ಒಂದೇ, ಹೇಗೂ ಹೌಸ್ ಇಸ್ ಇನ್ ಆರ್ಡರ್ ಎನ್ನುತ್ತಿದ್ದೀರಲ್ಲ, ನಡೆಸಿ ನೋಡೋಣ.

(ಗೊಂದಲ)

ಅಧ್ಯಕ್ಷರು.—ಈ ಸದನ ಇಬ್ಬರ ಸಹಕಾರದಿಂದ ಮುಂದೆಯಾದರೂ ಚೆನ್ನಾಗಿ ನಡೆಯಲಿ.

ಶ್ರೀ ಎಂ. ವೀರಪ್ಪಮೊಯ್ಲಿ.—ನಮ್ಮ ಸಹಕಾರ ನಿಮಗೆ ಇತ್ತು, ಆದರೆ ವಿಕಪಯುಖವಾಗಿ ಅವರ ಮಾತನ್ನು ಕೇಳಿಕೊಂಡು ನಿನ್ನೆ ನೀವು ಮಾರ್ಷಲ್ ಆರ್ಡರ್ ತರಹ ಆರ್ಡರ್ ಮಾಡಿದಿರಿ, ಈಗ ಏನು ಮಾಡುವುದು ?

ಅಧ್ಯಕ್ಷರು.—ಸದನದ ಅಭಿಪ್ರಾಯದ ಪ್ರಕಾರ ನಾನು ರೆಸಲ್ಯೂಷನನ್ನು ಓಟ್‌ಗೆ ಹಾಕಬೇಕಾಯಿತು, ಅದನ್ನು ಮಾಡಿದೆ ಅಷ್ಟೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಸರ್ಕಾರದವರಿಗೆ ಓಟ್ ಮಾಡುವುದೂ ಬೇಡ. ರಾಜಕೀಯಂವಾಗಿ ನಾವು ಇವರ ಜೊತೆ ಹೋರಾಡುತ್ತೇವೆಂದು ನಿರ್ಣಯಂ ಮಾಡಿದ್ದಾರೆ. ಆದ್ದರಿಂದ ನಾವು ಇಲ್ಲಿ ಏನು ಮಾಡುವುದಂ ?

ಅಧ್ಯಕ್ಷರು.—ನಿಮ್ಮ ಕಡೆಯಿಂದ ನಾಲ್ಕು ಜನ ಮಂತ್ರಿ, ಆ ಕಡೆಯಿಂದ ನಾಲ್ಕು ಜನ ಬನ್ನಿರಿ ಮಾತನಾಡೋಣ.

ಶ್ರೀ ಎಂ. ವೀರಪ್ಪಮೊಯ್ಲಿ.—ನಿನ್ನೆಯೇ ಈ ಕೆಲಸ ಮಾಡಬಹುದಿತ್ತು, ಸಿಂಧ್ಯಾ ಅವರ ಮಾತು ಕೇಳಿಕೊಂಡು ಅಡ್ಯಂತಾಯರನ್ನು ಹ್ಯಾಂಗ್ ಮಾಡಿದಿರಲ್ಲ ?

ಅಧ್ಯಕ್ಷರು.—ರೂಲ್ಸ್ ಪ್ರಕಾರ ಮಾಡಿದ್ದು.

ಶ್ರೀ ಎಂ. ವೀರಪ್ಪಮೊಯ್ಲಿ.—ತಾವು ಜಡ್ಜ್ ಕೆಲಸ ಮಾಡಬೇಕೇ ಹೊರತಂ ಹ್ಯಾಂಗ್‌ಮನ್ ಕೆಲಸ ಮಾಡಬಾರದಿತ್ತು. A prosecutor cannot be an executor. The prosecutor has become a judge and you have become a hangman.

ಅಧ್ಯಕ್ಷರು.—ರೂಲಿಂಗ್ ಕೊಡುವ ಹಕ್ಕು ನನಗಿದೆ, ಅದನ್ನು ಆ ರೀತಿ ಮಾಡಿದ್ದೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಅವರ ತೀರ್ಮಾನ ಎಂದೂ ಈ ಸದನದ ತೀರ್ಮಾನ ವಾಗುವುದಿಲ್ಲ. ತಾವು ತೀರ್ಮಾನ ಕೊಡಬೇಕು ಅವರ ತೀರ್ಮಾನವನ್ನು ಸದನದಲ್ಲಿ ಹೇಳತಕ್ಕಂತಹ ಪ್ರಯತ್ನ ಆದರೆ ಇದು ಸರ್ವಾಧಿಕಾರವಾಗುತ್ತದೆ.

(ಗೊಂದಲ)

ಅಧ್ಯಕ್ಷರು.—ಒಳಗೆ ಹೋಗಿ ಮಾತನಾಡೋಣ ನೀವು ೫–೬ ಜನ ಬನ್ನಿ ಅವರನ್ನೂ ಕರೆಸುತ್ತೇನೆ ಇಬ್ಬರೂ ಕೂಡಿ ಏನು ಮಾಡಬೇಕೆಂದು ವಿಚಾರ ಮಾಡೋಣ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ.—ರಾತ್ರಿ ಹಗಲು ಮೂರ್ನಾಲ್ಕು ದಿವಸ ಧರಣಿ ಕುಳಿತುಕೊಂಡದ್ದು ಇದೆ.....

(ಗೊಂದಲ)

ಅಧ್ಯಕ್ಷರು.—ಸೀಟಿಗೆ ಬಂದು ಮಾತನಾಡಿ.

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾವು ಇಲ್ಲಿಯೇ ನಿಂತು ಮಾತನಾಡುತ್ತೇವೆ. ನಾವು ಮಾಡಿರುವ ತಪ್ಪು ಏನು ? ಇವರು ನಾಮಿನೇಷನ್ ಮಾಡುತ್ತಿದ್ದಾರೆ ಅದು ತಪ್ಪು, ನಾಲ್ಕು ವಾರದಲ್ಲಿ ಚುನಾವಣೆ ಮಾಡಬೇಕಾಗಿತ್ತು ಮಾಡಲಿಲ್ಲ, ಇದು ಅಡ್ವರ್ನ್‌ಮೆಂಟ್ ಮೋಷನ್‌ಗೆ ಬರುತಿರಲಿಲ್ಲವೇ ? ನಾವು ನಿಮ್ಮನ್ನು ರಿಕ್ವೆಸ್ಟ್ ಮಾಡುತ್ತಿದ್ದೆವು, ಅಷ್ಟರಲ್ಲಿ ಏನೂ ಪಾಪ ಮಾಡದೇ ಇದ್ದವರನ್ನು ಕಾಲು ತೋರಿಸಿದರು, ಕೈ ತೋರಿಸಿದರು ಎಂದು ನಿನ್ನೆ ಹೇಳಿ, ಇವತ್ತು ಏನೋ ಥಂ ಥು ಎಂದು ಉಗಿದರಂ ಎಂದು ಹೇಳುವುದಕ್ಕೆ ಲೆಕ್ಕಾಚಾರವೇ ಬೇಡವೇ.....

(ಗೊಂದಲ)

ಅಧ್ಯಕ್ಷರು,— ಆ ಬಗ್ಗೆ ಬನ್ನಿ ಮಾತನಾಡೋಣ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಿನ್ನೆ ನಾನಂ ಇರಲಿಲ್ಲವೇ, ಸತ್ತು ಹೋಗಿದ್ದೇನೆ, ನಾನು ಇಲ್ಲಿ ಇರಲಿಲ್ಲವೇ ? I was there as the Leader of the Opposition. I was there waiting for your call. ಏನಂ ಮಾಡಬೇಕಮ್ಮ ಎಂದಂ ಕೇಳಬೇಕಿತ್ತು.

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಎಷ್ಟೆಷ್ಟು ವರ್ಷದ ಅನುಭವ ಇದೆ ಅವರುಗಳಿಗೆ, ಆಗ ಏಕೆ ಕರೆಯಲಿಲ್ಲ.....

(ಗೊಂದಲ)

ಅಧ್ಯಕ್ಷರು.—ತಾವು ಏನು ಹೇಳಬಹುದೋ ಹೇಳಿ. ಈಗ ಏನು ಮಾಡಬೇಕೆಂದು...

(ಗೊಂದಲ)

SRI M. VEERAPPA MOILY.—Can you lift us out from Vidhana Soudha? ಟ್ರೆಜರಿ ಬೆಂಚಿನಲ್ಲಿ ಕೂತುಕೊಂಡು ವ್ಯವಹಾರ ಮಾಡುತ್ತಾರೆ. ವಿರೋಧ ಪಕ್ಷದವರು.....

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ.—ಡಿಸಿಷನ್ (decision) ಆದರೆ ನಾವು ಏನು ಮಾಡೋವುದು ತಾವು ಏನು ಮಾಡುತ್ತೀರಿ, ಜನತೆ ಏನು ಮಾಡುತ್ತಾರೆ.....

(ಗೊಂದಲ)

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ...

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ.—ನಿಯಮದ ಪ್ರಕಾರ ನಾಲ್ಕು ವಾರದ ಒಳಗಡೆ ಚುನಾವಣೆಯಾಗ ಬೇಕಾಗಿತ್ತು ಮುಂಡಲ ಪಂಚಾಯತಿ ಅಧ್ಯಕ್ಷರದ್ದು, ಅದು ಆಗಲಿಲ್ಲ. There is constitutional deadlock.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ.—ಇವತ್ತು ಒಂದು ರೂಲನ್ನು ಮಾಡಿದ್ದಾರೆ ಇದಕ್ಕೆ ಸಂಬಂಧ ಪ್ಟಂತೆ. ಇದಕ್ಕಿಂತ ದೊಡ್ಡ ಅರ್ಜೆಂಟ್ ಮ್ಯಾಟರ್ ಯಾವುದು, ನಾಮಿನೇಷನ್‌ಗೆ.....The rule has been done when the session is giong on. Is it the intention of the Legislature to have a new rule with regard to the reservation for backward classes? If it is not the intention, why they should make the rule violating the intention of the legislature? ಸೆಷನ್ ನದೇ ಇದ್ದಾಗ ಮಾಡಿದ ವಿಚಾರ ಆಲ್ಲ ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ.....

(ಗೊಂದಲ)

ಅಧ್ಯಕ್ಷರು.—ಚರ್ಚೆ ಮಾಡಲು ಅವಕಾಶ ಮಾಡಿಕೊಡುತ್ತೇನೆ. ಈಗ ಸದನ ಯೋಗ್ಯ ಶಿಯಲ್ಲಿ ನಡೆಯಲು ಅವಕಾಶವಾಗುವಂತೆ ಮಾಡಬೇಕು.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯ್ಲಿ.—ನವರಿಗೂ ಇಚ್ಛೆ ಇದೆ, ಅವರಿಗೆ ಇಚ್ಛೆ ಇಲ್ಲ. ಇವತ್ತಿನವರೆಗೂ ಣೆ ಮಾಡಲಿಲ್ಲ.

(ಗೊಂದಲ)

ಅಧ್ಯಕ್ಷರು.—ತಮ್ಮ ಸಲಹೆಯನ್ನು ಕೊಡಿ ಅವರನ್ನೂ ಕೇಳುತ್ತೇನೆ, ಆ ಮೇಲೆ ಡಿಸಿಷನ್ ಕೊಳ್ತೇನೆ.

(ಗೊಂದಲ)

ಶ್ರೀಮತಿ ನಾಗರತ್ನಪ್ಪ.—ನನ್ನ ಸಿನ್ಸಿಯರ್ ಅಡ್ವೈಸ್ ಏನೆಂದರೆ ತಾವು ತಲೆ ಕೆಡಿಸಿಕೊಳ್ಳಬೇಡಿ. They have thrown a challenge.

SRI M. VEERAPPA MOILY.—Those people want streets politics. We will take it as a challenge of confrontation on the streets. We will not allow the government to function inside or outside the House.

SMT K. S. NAGARATHNAMMA.—They have thrown a challenge. We have accepted that challenge.

(ಗದ್ದಲ)

ಅಧ್ಯಕ್ಷರು.—ಅವರದನ್ನು ಕೇಳಬೇಕು, ನಿಮ್ಮದನ್ನೂ ಕೇಳಬೇಕು.

(ಗದ್ದಲ)

ಶ್ರೀ ಎಂ. ವೀರಪ್ಪಮೊಯ್ಲಿ.—ಅವರು ಹೇಳಿದ್ದನ್ನು ಕೇಳಬೇಕು, ಆದರೆ ನಾವು ಹೇಳುವುದನ್ನು ನೀವು ಕೇಳುವುದಕ್ಕೆ ಆಗುವುದಿಲ್ಲವೇ ?

ಅಧ್ಯಕ್ಷರು.—ಎಲ್ಲರೂ ಕೂತು ಮಾತನಾಡಿ ಏನು ಮಾಡಲು ಸಾಧ್ಯವೋ ಅದನ್ನು ಮಾಡೋಣ.

SRI M. VEERAPPA MOILY.—We want this to happen but Government doesn't want that.....

ಅವರ ಉದ್ದೇಶವನ್ನು ಮೊದಲು ಕೇಳಿ. ಈ ರಾಜ್ಯದಲ್ಲಿ ಈ ಸದನ ಪ್ರಜಾಪ್ರಭುತ್ವ ರೀತಿ ನಡೆಯಬೇಕೋ ಅಥವಾ ಬೇರೆ ರೀತಿಯೋ ಎಂಬುದನ್ನು ಅವರಿಗೆ ಕೇಳಿ.

ಅಧ್ಯಕ್ಷರು.—ಈಗ ಮಾತನಾಡೋಣ ಬನ್ನಿ.

(ಸದಸ್ಯರು ಬರುವುದಿಲ್ಲ ಎಂದರು)

(ಗೊಂದಲ)

ಶ್ರೀ ಎಂ. ವೀರಪ್ಪಮೊಯ್ಲಿ.—ಸಂಬ್ಬರಾಯನಕಟ್ಟೆ ಭಾಷಣ ಎಂದು ಅವರು ಹೇಳಿದಾಗಲೇ ಪ್ರಾರಂಭವಾಗಿದ್ದು ಇದೆಲ್ಲ.

ಅಧ್ಯಕ್ಷರು.—ಅಲ್ಲಿದ್ದು ನೀವು ಮಾತನಾಡುವುದು ಅಸಿಂಧುವೆಂದು ಹೇಳಬಹುದು, ಅದನ್ನೆ ನಾನು ಹೇಳುವುದಿಲ್ಲ. ಈಗ ತಮ್ಮ ಕಡೆಯಿಂದ ೫ ಜನ ಆ ಕಡೆಯಿಂದ ೫ ಜನ ಬನ್ನಿ. ಸಭೆಯನ್ನು ೧೦ ನಿಮಿಷಗಳ ಕಾಲ ಮುಂದೂಡಿದ್ದೇನೆ.

(ಸದನವು ೧೨.೨೩ಕ್ಕೆ ೧೦ ನಿಮಿಷಗಳ ಕಾಲ ಮುಂದೂಡಲ್ಪಟ್ಟಿತು.)

(ಸಭೆಯು ಪುನಃ ೬ ಗಂಟೆ ೪೦ ನಿಮಿಷಕ್ಕೆ ಸಮಾವೇಶಗೊಂಡಿತು)

ಮಾನ್ಯ ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಪೀಠವನ್ನಲಂಕರಿಸಿದರು.

ಅಧ್ಯಕ್ಷರು.—ಈಗ ಸಭೆಯನ್ನು ಮುಂದೂಡಲಾಗಿದೆ. ನಾಳೆ ಬೆಳಿಗ್ಗೆ ೧೧ ಗಂಟೆಗೆ ಪುನಃ ಸೇರುವುದು.

(ಸಭೆಯು ಸಂಜೆ ೬ಗಂಟೆ ೪೦ ನಿಮಿಷಕ್ಕೆ ಮುಂಕ್ತಾಯವಾಗಿ ಮತ್ತೆ ೧೮ನೇ ಮಾರ್ಚ್ ೧೯೮೬ನೇ ಬುಧುವಾರ ಬೆಳಿಗ್ಗೆ ೧೧ ಗಂಟೆಗೆ ಸಮಾವೇಶಗೊಳ್ಳಲು ತೀರ್ಮಾನಿಸಿತು.)